# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ನಡವಳಿಗಳು

**ವಿಷಯ:** ದೇವದುರ್ಗ 110ಕೆ.ವಿ. ಉಪಕೇಂದ್ರದ ಆವರಣದಲ್ಲಿ ಜೆಸ್ಕಾಂ ನ ಉಪವಿಭಾಗ ಕಚೇರಿ ನಿರ್ಮಿಸಲು 25 X 20 ಮೀ. ಜಾಗವನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ.

**ಓದಿದೆ:**
1. ಕವಿಪ್ರನಿನಿ/ಬಿ9/4948/04-05 ದಿನಾಂಕ 29/04/2005.
2. ಕವಿಪ್ರನಿನಿ/ಬಿ9/4948/04-05 ದಿನಾಂಕ 26/10/2006.
3. ಮು.ಇಂ(ವಿ)/ಪ್ರ.ವ.ಗು/ಸಿವಿಲ್/20-21/7835-38 ದಿನಾಂಕ 07/11/2020.
4. ದಿನಾಂಕ 09/04/2021 ರಂದು ನಡೆದ 124 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆ ನಡವಳಿಗಳು.

**ಪೀಠಿಕೆ:**

ಯಾದಗಿರಿ ಜಿಲ್ಲೆ, ದೇವದುರ್ಗ ತಾಲ್ಲೂಕು, ದೇವದುರ್ಗ ಗ್ರಾಮದ ಸರ್ವೆ ಸಂಖ್ಯೆ 8/1 ಮತ್ತು 8/2 ರಲ್ಲಿ ಒಟ್ಟು 7 ಎಕರೆ 02 ಗುಂಟೆ ಜಮೀನು ಕವಿಪ್ರನಿನಿಯ ಒಡೆತನದಲ್ಲಿದ್ದು, ಸದರಿ ಜಾಗದಲ್ಲಿ ಕವಿಪ್ರನಿನಿಯ 110/11ಕೆ.ವಿ ಉಪಕೇಂದ್ರ, ವಸತಿ ಗೃಹಗಳು, ಜೆಸ್ಕಾಂ ನ ಉಪವಿಭಾಗ ಕಚೇರಿ, ಉಗ್ರಾಣ ಇತ್ಯಾದಿಗಳು ಕಾರ್ಯನಿರ್ವಹಿಸುತ್ತಿದೆ. ಸದರಿ ಉಪಕೇಂದ್ರದ ಆವರಣದಲ್ಲಿ ಹಾಲಿ ಇರುವ ಉಪವಿಭಾಗ ಕಚೇರಿ ಕಟ್ಟಡವು ಬಹಳ ಹಳೆಯ ಹಾಗೂ ದುರ್ಬಲವಾಗಿರುವುದರಿಂದ ಸದರಿ ಆವರಣದಲ್ಲಿ ಖಾಲಿ ಇರುವ ಜಾಗದಲ್ಲಿ ಉಪವಿಭಾಗ ಕಚೇರಿ ನಿರ್ಮಿಸಲು ಜೆಸ್ಕಾಂ ನಿಂದ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕಲಬುರಗಿ ರವರು ಸದರಿ ಉಪಕೇಂದ್ರದ ಆವರಣದಲ್ಲಿ ಜೆಸ್ಕಾಂಗೆ 25 X 20 ಮೀಟರ್ ಅಳತೆಯ ಜಾಗವನ್ನು ಉಪವಿಭಾಗ ಕಚೇರಿ ಕಟ್ಟಡ ನಿರ್ಮಾಣಕ್ಕೆ ನೀಡುವುದರಿಂದ ಮುಂಬರುವ ದಿನಗಳಲ್ಲಿ ಉಪಕೇಂದ್ರದ ವಿಸ್ತರಣೆಗೆ ಯಾವುದೇ ಅಡ್ಡಿಬರುವುದಿಲ್ಲವೆಂದು ತಿಳಿಸಿದ್ದರು. ಸದರಿ ಅಭಿಪ್ರಾಯಕ್ಕೆ ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ) ಕಚೇರಿಯ ತಾಂತ್ರಿಕ ಶಾಖೆ ಸಹ ಸಹಮತ ವ್ಯಕ್ತಪಡಿಸಿತ್ತು.

ಕವಿಪ್ರನಿನಿ ಯ ಒಡೆತನದಲ್ಲಿದ್ದ ಒಟ್ಟಾರೆ ಆಸ್ತಿಯನ್ನು ಪ್ರಸರಣ ಆಸ್ತಿ ಹಾಗೂ ವಿತರಣಾ ಆಸ್ತಿಗಳೆಂದು ವರ್ಗೀಕರಿಸಿದ ನಂತರ, ಎಸ್ಕಾಂ ಗಳಿಗೆ ಅವಶ್ಯವಿರುವ ಕವಿಪ್ರನಿನಿ ಜಾಗವನ್ನು ಹಾಗೂ ಕವಿಪ್ರನಿನಿ ಗೆ ಅವಶ್ಯವಿರುವ ಎಸ್ಕಾಂ ಗಳ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ, ದಿನಾಂಕ 29/04/2005 ರ ಆದೇಶದಲ್ಲಿ Arms-length arrangement ನ್ನು ಅನುಮೋದಿಸಲಾಗಿದೆ. ಸದರಿ ಆದೇಶದನ್ವಯ, ಕವಿಪ್ರನಿನಿ ಯಿಂದ ಎಸ್ಕಾಂಗಳಿಗೆ ಲೀಸ್ ಆಧಾರದ ಮೇಲೆ ನೀಡುವ ಜಾಗಗಳ ವಾರ್ಷಿಕ ಲೀಸ್ ಮೊತ್ತವನ್ನು ಸಾಂಕೇತಿಕವಾಗಿ ಪ್ರಚಲಿತ ಮಾರ್ಗಸೂಚಿ ಬೆಲೆಯ 0.1% ರಂತೆ ನಿಗದಿಪಡಿಸಬಹುದಾಗಿದ್ದು, ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ ಅಂದಿನ ಮಾರ್ಗಸೂಚಿ ಬೆಲೆಯನ್ವಯ ಪರಿಷ್ಕರಿಸಬಹುದಾಗಿರುತ್ತದೆ.

ಜೆಸ್ಕಾಂ ನಿಂದ ಕಲಬುರಗಿ ಪ್ರಸರಣ ವ್ಯಾಪ್ತಿಯಲ್ಲಿ ಕವಿಪ್ರನಿನಿ ಕಟ್ಟಡಗಳ ಬಾಡಿಗೆ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚ ಹಾಗೂ ಲೀಸ್ ಮೊತ್ತಗಳ ಬಾಕಿ ಮೊತ್ತವನ್ನು ಜೆಸ್ಕಾಂ ಪೂರ್ಣವಾಗಿ ಪಾವತಿಸಿಲ್ಲದ ಕಾರಣ ಸದರಿ ಮೊತ್ತವನ್ನು ಪಾವತಿಸಿಕೊಂಡು ಜೆಸ್ಕಾಂ ಕೋರಿರುವ ಜಾಗವನ್ನು Arms-length arrangement ರನ್ವಯ 30 ವರ್ಷಗಳ ಲೀಸ್ ಆಧಾರದ ಮೇಲೆ ಉಪವಿಭಾಗ ಕಚೇರಿ ಕಟ್ಟಡ ನಿರ್ಮಿಸಲು ನೀಡಬಹುದೆಂಬ ಪ್ರಸ್ತಾವನೆಯನ್ನು ದಿನಾಂಕ 09/04/2021 ರಂದು ನಡೆದ 124 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ/ಆದೇಶ ಸಂಖ್ಯೆ: ಬಿ9/4811/19-20/ಬೆಂಗಳೂರು** ದಿನಾಂಕ 17 JUN 2021

ದಿನಾಂಕ 09/04/2021 ರ 124 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರ ಸಭೆಯ ನಡವಳಿಯನ್ವಯ ಈ ಕೆಳಕಂಡಂತೆ ಆದೇಶಿಸಲಾಗಿದೆ.

1. ಯಾದಗಿರಿ ಜಿಲ್ಲೆ, ದೇವದುರ್ಗ ತಾಲ್ಲೂಕು, ದೇವದುರ್ಗ 110ಕೆ.ವಿ. ಉಪಕೇಂದ್ರದ ಆವರಣದಲ್ಲಿ ಜೆಸ್ಕಾಂ ನ ಉಪವಿಭಾಗ ಕಚೇರಿ ನಿರ್ಮಿಸಲು 25 X 20 ಮೀ. ಜಾಗವನ್ನು Arms-length arrangement ನಿಯಮಗಳನ್ವಯ ಜೆಸ್ಕಾಂ ಗೆ ಲೀಸ್ ಆಧಾರದ ಮೇಲೆ ನೀಡಲು ಅನುಮೋದಿಸಲಾಗಿದೆ. ಈ ಸಂಬಂಧ, ಜೆಸ್ಕಾಂ ನಿಂದ ಕಲಬುರಗಿ ವಲಯ ವ್ಯಾಪ್ತಿಯಲ್ಲಿ ಕವಿಪ್ರನಿನಿ ಕಟ್ಟಡಗಳ ಬಾಡಿಗೆ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚ ಹಾಗೂ ಲೀಸ್ ಮೊತ್ತಗಳ ಬಾಕಿ ಮೊತ್ತವನ್ನು ಜೆಸ್ಕಾಂ ಪಾವತಿಸಿದ ನಂತರ ಸದರಿ ಜಾಗದ ಲೀಸ್ ಒಪ್ಪಂದ ಮಾಡಿಕೊಂಡು ಹಸ್ತಾಂತರಿಸಲು ಅನುಮೋದಿಸಲಾಗಿದೆ.

2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕಲಬುರಗಿ ರವರಿಗೆ ಮೇಲಿನ ಆದೇಶದಂತೆ ಮುಂದಿನ ಕ್ರಮಕೈಗೊಳ್ಳಲು ಕಾರ್ಯನಿರ್ವಾಹಕ ಇಂಜಿನಿಯರ್ (ವಿ),ಟಿಎಲ್ ಮತ್ತು ಎಸ್‌ಎಸ್ ವಿಭಾಗ, ಯಾದಗಿರಿ ರವರಿಗೆ ಸೂಕ್ತ ನಿರ್ದೇಶನ ನೀಡಲು ಸಹ ಅನುಮೋದಿಸಲಾಗಿದೆ.

ಮುಂದುವರೆದಂತೆ, ಸದರಿ ಜಾಗವನ್ನು ಜೆಸ್ಕಾಂ ಗೆ ಈ ಕೆಳಕಂಡ ಷರತ್ತುಗಳನ್ವಯ ಮುಂದಿನ ಕ್ರಮಕೈಗೊಳ್ಳಲು ಸೂಚಿಸಲಾಗಿದೆ

1. ಸದರಿ ಜಾಗದ ಹಾಲಿ ಮಾರ್ಗಸೂಚಿ ಬೆಲೆಯನ್ವಯ ಹಾಗೂ ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಹಾಲಿ ಇರುವ Arms-length arrangement ನ ನಿಯಮಗಳಂತೆ, ವಾರ್ಷಿಕ ಲೀಸ್ ಮೊತ್ತವನ್ನು ಲೆಕ್ಕಾಚಾರ ಮಾಡಿ ಪಾವತಿಸುವಂತೆ, ಜೆಸ್ಕಾಂ ಗೆ ಸೂಚಿಸುವುದು. ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ, ಅಂದಿನ ಮಾರ್ಗಸೂಚಿ ಬೆಲೆಯನ್ವಯ ಪರಿಷ್ಕರಿಸುವುದು. ಹಾಗೂ ವಾರ್ಷಿಕ ಲೀಸ್ ಮೊತ್ತವನ್ನು, ಪ್ರತಿ ವರ್ಷ ಏಪ್ರಿಲ್ ಮಾಹೆಯ ಮೊದಲ ವಾರದಲ್ಲಿ, ಮುಂಗಡವಾಗಿ ಯಾದಗಿರಿ, ಟಿಎಲ್ ಮತ್ತು ಎಸ್‌ಎಸ್ ವಿಭಾಗಕ್ಕೆ, ಪಾವತಿಸುವಂತೆ ಜೆಸ್ಕಾಂ ಗೆ ಸೂಚಿಸುವುದು.

2. ಜೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗವನ್ನು, ಉದ್ದೇಶಿತ ಕಟ್ಟಡ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೆ ಉದ್ದೇಶಕ್ಕೆ ಬಳಸಬಾರದೆಂಬ, ಷರತ್ತನ್ನು ವಿಧಿಸುವುದು. ಜೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಕರಾರು ಒಪ್ಪಂದ ಮಾಡಿಕೊಂಡ ದಿನದಿಂದ, ಒಂದು ವರ್ಷದ ಅವಧಿಯೊಳಗೆ, ಉದ್ದೇಶಿತ ಕಟ್ಟಡ ನಿರ್ಮಾಣಕ್ಕೆ ಕ್ರಮಕೈಗೊಳ್ಳುವಂತೆ ತಿಳಿಸುವುದು, ಇಲ್ಲವಾದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದೆಂಬ ಷರತ್ತನ್ನು ವಿಧಿಸುವುದು.

3. ನಿಗಮ ಲೀಸ್ ನೀಡಲು ಅನುಮೋದಿಸಿರುವ ಜಾಗ ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಜೆಸ್ಕಾಂ ಗೆ ಸೂಚಿಸುವುದು.

4. ಲೀಸ್ ಆಧಾರದ ಮೇಲೆ ಜೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಬಗ್ಗೆ, ಟಿಎಲ್ ಮತ್ತು ಎಸ್‌ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

5. ಜೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಬಗ್ಗೆ ನಿಗಮದ ದಿನಾಂಕ 24/04/2005 ರ ಆದೇಶ ಹಾಗೂ 26/10/2006 ಸುತ್ತೋಲೆಯಲ್ಲಿ ತಿಳಿಸಿರುವ Arms-length arrangement ನ ನಿಯಮಗಳನ್ವಯ ಮುಂದಿನ ಅಗತ್ಯ ಕ್ರಮಕೈಗೊಳ್ಳುವುದು.

ಆದೇಶದ ಮೇರೆಗೆ

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು:-

1. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
2. ನಿರ್ದೇಶಕರು (ತಾಂತ್ರಿಕ), ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
3. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಕಲಬುರಗಿ.
4. ಮುಖ್ಯ ಇಂಜಿನಿಯರ್ (ವಿ), ಕಾ ಮತ್ತು ಪಾ ವಲಯ, ಜೆಸ್ಕಾಂ, ಕಲಬುರಗಿ.
5. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ.
6. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಕಲಬುರಗಿ.
8. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
9. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
10. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಕಲಬುರಗಿ.
11. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್ಎಸ್ ವಿಭಾಗ, ಕವಿಪ್ರನಿನಿ, ಕಲಬುರಗಿ.
12. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಕಲಬುರಗಿ.
13. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಕಲಬುರಗಿ.
14. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
15. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.